# ಸುನಂದಾ ಕಡಮೆ ಅವರ ಕಥೆಗಳಲ್ಲಿ ಮಹಿಳೆ ಮತ್ತು ವೈಚಾರಿಕ ಪ್ರಜ್ಞೆ

**ಮಾನಸ ಪ್ರಿಯದರ್ಶಿನಿ ಹೆಚ್. ಬಿ.**

ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೊಳ್ಳೇಗಾಲ.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246514**

## ABSTRACT:

ಸುನಂದಾ ಪ್ರಕಾಶ ಕಡಮೆ ಅವರ ಪುಟ್ಟ ಪಾದದ ಗುರುತು, ಗಾಂಧಿ ಚಿತ್ರದ ನೋಟು, ಕಂಬಗಳ ಮರೆಯಲ್ಲಿ ಹಾಗೂ ತುದಿ ಮಡಚಿಟ್ಟ ಪುಟ-ಕಥಾ ಸಂಕಲನಗಳ ಕಥೆಗಳಲ್ಲಿ ಕಂಡುಬರುವ ಸಂಪ್ರದಾಯ, ಆಚರಣೆ, ವೈಚಾರಿಕತೆ ಇವುಗಳನ್ನು ಈ ಲೇಖನದಲ್ಲಿ ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಸುನಂದಾ ಪ್ರಕಾಶ ಕಡಮೆ ಅವರ ಬಹುತೇಕ ಕತೆಗಳ ಧಾತು ಕುಟುಂಬ ಮತ್ತು ಸಮಾಜದೊಳಗೆ ಗಿರಕಿ ಹೊಡೆಯುತ್ತದೆ. ಕುಟುಂಬದೊಳಗೆ ಹುಟ್ಟುವ ಕಥೆ ಸಾಮಾಜಿಕ ಆಯಾಮ ಪಡೆದುಕೊಳ್ಳುತ್ತಾ ಸಮಕಾಲೀನ ಸಮಾಜ, ಮಾನವೀಯ ಸಂಬಂಧಗಳನ್ನು ಕುರಿತು ಚಿಂತಿಸುತ್ತದೆ. ಹಾಗಾಗಿ ಕಥನ ಲೋಕದ ವಿಸ್ತಾರವನ್ನು ತೆರೆದಿಡುವ ಸುನಂದಾ ಪ್ರಕಾಶ ಕಡಮೆ ಅವರ ಕತೆಗಳಲ್ಲಿ ಬಲವಾದ ಆತ್ಮವಿಶ್ವಾಸ ಮತ್ತು ಪ್ರಬುದ್ಧಗೊಂಡ ಕಥನ ಕೌಶಲ್ಯ ಕಾಣುತ್ತದೆ.

ಸಂಸಾರ ನಿತ್ಯದ ವಿವರಗಳೇ ಸುನಂದಾ ಅವರ ಬಹುಪಾಲು ಕತೆಗಳ ಇಟ್ಟಿಗೆ, ಮಣ್ಣು, ಗಾರೆ ಇತ್ಯಾದಿ ಎಂದು ವಿವೇಕಶಾನಭಾಗ ಅವರು ಸುನಂದಾ ಕಥೆಗಳನ್ನು ಕುರಿತು ಅತ್ಯಂತ ಮೌಲಿಕವಾದ ಮಾತುಗಳನ್ನಾಡಿದ್ದಾರೆ. ಅಂದರೆ ಇವರ ಹೆಚ್ಚಿನ ಕಥೆಗಳಲ್ಲಿ ಬರುವ ಸಂಬಂಧಗಳ ನಡುವಿನ ತಿಕ್ಕಾಟಗಳ ಸೂಕ್ಷ್ಮತೆ, ಲೌಕಿಕ ಸೆಳೆತಗಳು, ಕುಟುಂಬ ಮತ್ತು ಸಮಾಜ-ಇವುಗಳ ನಡುವೆ ಅಂತಸ್ಥವಾಗಿರುವ ಸಂಬಂಧಗಳು ಮತ್ತು ಜವಾಬ್ದಾರಿಗಳು, ಆದರ್ಶ ಮತ್ತು ವಾಸ್ತವ, ವೈಚಾರಿಕತೆ ಆಧುನಿಕತೆಯ ವ್ಯಾಮೋಹ, ಮನುಷ್ಯಪ್ರೀತಿ, ತಾಕಲಾಟ, ಬದುಕಿನ ಬಗೆಗಿನ ಕಕ್ಕೂಲಾತಿ – ಇವೇ ಮೊದಲಾದ ಅಂಶಗಳು ಇವರ ಕಥೆಗಳಲ್ಲಿ ಕಾಣಸಿಗುತ್ತವೆ.

## KEYWORDS:

ಕಥಾ ಸಾಹಿತ್ಯ, ಗಾಂಧಿ ಚಿತ್ರದ ನೋಟು, ಕುಟುಂಬ, ಆಧುನಿಕತೆ, ಮನುಷ್ಯ ಪ್ರೀತಿ.

ಪರಂಪರಾಗತ ರೂಢಿಯಾಗಿದ್ದ ಸಂಪ್ರದಾಯ ಮತ್ತು ಆಚರಣೆಗಳು ಕಾಲಕಾಲಕ್ಕೆ ತಮ್ಮ ಪ್ರಾಮುಖ್ಯತೆ, ಅಸ್ತಿತ್ವ ಉಳಿಸಿಕೊಂಡ ಪರಿಣಾಮ ಅವು ಶೋಷಣೆಯ ಸರಕಗಾಗಿದ್ದವು. ಆದರೆ ಅವುಗಳಲ್ಲಿ ಹುದುಗಿದ್ದ ಮೂಢನಂಬಿಕೆ,

ಕಂದಾಚಾರ, ಅಸಮಾನತೆ, ಅಸ್ಪೃಶ್ಯತೆಯಂಥ ಮಾನವ ವಿರೋಧಿ ಅಂಶಗಳನ್ನು ಪ್ರಶ್ನಿಸುವ ಮನೋಭಾವ ಬೆಳೆದುದು ಮಹಿಳೆಯು ತಾನು ಆಧುನಿಕ ಶಿಕ್ಷಣಕ್ಕೆ ತನ್ನನ್ನು ತಾನು ತೆರೆದುಕೊಂಡಾಗ. ಇದರಿಂದ ಗಂಡು ಜೀವಿಕೂಡ ಬದಲಾಗತೊಡಗಿತು. ಅವೈಜ್ಞಾನಿಕವಾಗಿದ್ದ ಚಾಲ್ತಿಯಲ್ಲಿದ್ದ ಸಂಪ್ರದಾಯ ಮತ್ತು ಆಚರಣೆಗಳ ನಡುವೆ ವೈಚಾರಿಕತೆ ಪ್ರವೇಶವಾದಾಗ ಆಧುನಿಕ ಮಾನವನ ಸಾಮಾಜಿಕ ಪ್ರಜ್ಞೆ ವೈಜ್ಞಾನಿಕ ತಳಹದಿಯ ಮೇಲೆ ರೂಪುಗೊಂಡಿತು. ಹೀಗೆ ರೂಪುಗೊಂಡ ವೈಚಾರಿಕ, ವೈಜ್ಞಾನಿಕ ನೆಲೆಯ ಸಾಮಾಜಿಕ ಪ್ರಜ್ಞೆ ದಿಢೀರನೇ ರೂಪುಗೊಂಡದ್ದಲ್ಲ; ಇದಕ್ಕೆ ದೀರ್ಘ ಸಮಯವೂ ಹಿಡಿದಿದೆ ಎಂದರೆ ತಪ್ಪಾಗಲಾರದು.

ವೈಜ್ಞಾನಿಕ, ವೈಚಾರಿಕ, ಸಾಮಾಜಿಕ ಪ್ರಜ್ಞೆಗಳನ್ನು ಪ್ರತಿಪಾದಿಸುವ ಸುನಂದಾ ಪ್ರಕಾಶ ಕಡಮೆ ಅವರು ತಮ್ಮ ಕಥೆಗಳಲ್ಲಿ ಆಧುನಿಕತೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕೆನ್ನುತ್ತಾರೆ. ಸಂಪ್ರದಾಯ ಮತ್ತು ಆಚರಣೆಗಳ ಹಿನ್ನೆಲೆಯಲ್ಲಿ ರೂಪುಗೊಂಡ ಕಥೆಗಳಲ್ಲಿ 'ಹೊಸ್ತಿಲು ತೊಳೆದ ನೀರು', 'ಯಾರ ಮೌನದ ಗವಿಯು', 'ಒಂದು ಮುಗುಳು ನಗು', 'ಒಲೆಯಲ್ಲಿ ತರಗೆಲೆ', 'ನಡುಹಗಲಿನ ಮೌನ', 'ಕುಡಿ ಕಟ್ಟಿದ ದೀಪ', 'ಕಸದ ಬಾಗಿನ', 'ದೊಡ್ಡಾಲದ ಮರ', 'ಬೇರು ಕಳಚುವ ಮುನ್ನ', 'ಕಂಬಗಳ ಮರೆಯಲ್ಲಿ', 'ಪತ್ರೊಡೆ', 'ನಿನ್ನದೊಂದು ನೋಟಬೇಕು', 'ತಂಕಿ', 'ಜೇಡ ಬಲೆ ನೇಯುತಿದೆ', 'ಗಾಂಧಿ ಚಿತ್ರದ ನೋಟು', 'ಪ್ರಕೃತಿ ಧಾವಂತ' ಕಥೆಗಳು ಪ್ರಮುಖವಾದವು.

'ಹೊಸ್ತಿಲು ತೊಳೆದ ನೀರು' ಕತೆಯಲ್ಲಿ ನಿವೃತ್ತರಾಗಿರುವ ಡಾ. ತೆಳ್ಳಾರೆಯವರು ವೈಚಾರಿಕ ಪ್ರಜ್ಞೆವುಳ್ಳವರಾಗಿದರೂ ಅವರ ಪತ್ನಿ ಶ್ರೀಮತಿ ತೆಳ್ಳಾರೆಯವರು ಮಾತ್ರ ಸಂಪ್ರದಾಯಕ್ಕೆ, ಮೌಢ್ಯಕ್ಕೆ ಅಂಟಿಕೊಂಡಿರುವುದು ಕತೆಯಲ್ಲಿ ವ್ಯಕ್ತಗೊಂಡಿದೆ. "ಈ ಕಾಲನಿಯೊಳಗೆ ಹನ್ನೊಂದ್ ಮನೀ ಕಟ್ಟ್ಯಾನಂತ, ಎಲ್ಲ ಅವರವರ ಮನಿಯೊಳಗ ಅವರು ಆರಾಮ ಇಲ್ಲೆನು? ನಮ್ಮದ್ ಕಟ್ಟೊ ಮುಂದನ ಬಡಕೊಂಡೆ, ವಾಸ್ತು ರ್‍ಲಿ ಅಂತ, ನನ್ ಮಾತ್ ಕೇಳಿದ್ರೇನ ನೀವ್" ಎಂದು ಗಂಡನನ್ನು ಪ್ರಶ್ನಿಸುವ ಶ್ರೀಮತಿ ತೆಳ್ಳಾರೆಯವರು ತಮ್ಮ ಮಗ ಕುಮಾರನು ಇದ್ದಕ್ಕಿದ್ದ ಹಾಗೆ ಬೆಂಗಳೂರಿನ ಕಂಪನಿಯಿಂದ ಕೆಲಸ ಬಿಟ್ಟು ಬಂದದ್ದಕ್ಕೂ ಕಾರಣ, ತಮ್ಮ ಮನೆಯ ವಾಸ್ತು ಸರಿಯಿಲ್ಲದಿರುವುದೇ ಕಾರಣ ಎಂಬುದಾಗಿ ನಂಬಿದ್ದರು. ಮೌಢ್ಯ ಮತ್ತು ಅಂಧಾಚರಣೆಯನ್ನು ಅನುಸರಿಸುತ್ತಿದ್ದ ತಾಯಿಗೆ ಕುಮಾರನು ತಾನು ಕಾರು ತಗೊಳ್ಳುವ ಸುದ್ದಿ ತಿಳಿದಾಗ ಇಂಜಿನಿಯರ್ ಸಿ.ಡಿ. ಹಿರೇಮಠರು "ಮಗಾ ಒಂಬತ್ ಲಕ್ಷದ ಕಾರ್ ತಗೋತಾನಂತ, ಏನೀ ಅಕ್ಕಾರ್, ನೀವ್ ನೋಡೀದ್ರ ಮಗನ ನೌಕ್ರೀನ ಸರಿ ಇಲ್ಲಂತಿರಿ" ಎಂದು ಹೇಳಿದ್ದು ವೈಚಾರಿಕ ಪ್ರಜ್ಞೆಯಿಂದ ಕೂಡಿರುವುದಾಗಿ ಕಂಡುಬರುತ್ತದೆ.

ಆದರೆ ಯಾವುದೇ ವೈಚಾರಿಕ ದೃಷ್ಟಿಕೋನವಿಲ್ಲದ ಶ್ರೀಮತಿ ತೆಳ್ಳಾರೆ ಮಾತ್ರ ಸಮಯ ಸಂದರ್ಭ ಬಂದಾಗಲೆಲ್ಲಾ ಅನಿಷ್ಟಕ್ಕೆಲ್ಲ ಶನೇಶ್ವರ ಕಾರಣ ಎನ್ನುವ ಗಾದೆಯಂತೆ ಮನೆಯಲ್ಲಿ ಘಟಿಸುವ ಸಣ್ಣಪುಟ್ಟ ವಿಚಾರಗಳಿಗೂ ವಾಸ್ತುವನ್ನು ಅನ್ವಯಿಸಿ ಸಂಪ್ರದಾಯವನ್ನು ಚಾಚುತಪ್ಪದೆ ಆಚರಿಸುತ್ತಿದ್ದಳು. ಅವರೆ ಒಮ್ಮೆ "ಮನೀ ಹೊಸಲಾ ತೊಳದ್ ನೀರು ಸುಂಯ್ಯಂತ ರಸ್ತೇಕ್ ಹೋದ್ರ ಮನೀ ಹೆಂಗಸರೀಗೆ ಮಂಡಿ ನೋವು ತಪ್ಪಿದ್ದಲ್ಲಂತ, ಹೊಸಲಾ ತೊಳದ ನೀರು ಮನೀ ಬಾಗಲದ ಬಲಭಾಗಕ್ಕೆ ಹಚ್ಚಕೊಂಡ ಗಿಡಗಂಟಿಗಳಿಗ ಹೋಗಬೇಕಂತ, ಹಂಗೇನರ ಮಾಡಾಕಾಕ್ಕೇತನ ನೋಡ್ರೀ ಸ್ವಲ್ಪ" ಎನ್ನುವಲ್ಲಿ ಮೂಢನಂಬಿಕೆ, ಅಂಧಾನುಕರಣೆ ಕಂಡುಬರುತ್ತದೆ. ಆಧುನಿಕ ತಂತ್ರಜ್ಞಾನ ಯುಗದಲ್ಲೂ ಈ ಬಗೆಯ ಮೌಢ್ಯ, ಕಂದಾಚಾರ, ಅರ್ಥವಿಲ್ಲದ ಆಚರಣೆಗಳನ್ನು ಆಚರಿಸುವುದನ್ನು ಕಥೆಗಾರರು ಮೃದುವಾಗಿಯೇ ವಿರೋಧಿಸುವುದು ಕಂಡುಬರುತ್ತದೆ. 'ಹೊಸಲಾ ತೊಳ್ದನೀರು, ಹೊಸಲಾ ತೊಳ್ದನೀರು, ಅಂತ ನರ್ನ ಹಂಗ ಮನೀ ಬಾಜೂಕ ಯಾರಾರ ನಿಂದ್ರಸಕೊಳ್ತಾರನ? ಹುಚ್ಚಿ, ಸೊಳ್ಳೆಪಳ್ಳಿ ನುಸಾಪಸಾ ಹುಟ್ಕೊಳ್ತಾವು, ಇನ್ನೊಮ್ ಕರೇಬ್ಯಾಡ್ ನೋಡು ಆ ಹಿರೇಮಠದ ಸಿಟ್ ಬಂತದ್ರ ಟೀವಿ ಕೇಬಲ್ ಕಿತ್ತಿ ಬಗೀತೇನಿ' ಎಂದು ತಮ್ಮ ಸಾತ್ವಿಕ ಸಿಟ್ಟು ಹೊರಹಾಕಿದ್ದರು. ವೈಚಾರಿಕಪ್ರಜ್ಞೆವುಳ್ಳ ಡಾ. ತೆಳ್ಳಾರೆಯವರು ಈ ಕತೆಯಲ್ಲಿ ಹೇಳುವ ಹಾಗೆ ಇಂದು ಈ ಬಗೆಯ ಮೌಢ್ಯತೆ ಹುಟ್ಟಲು, ಪರಾಕಾಷ್ಠೆ ತಲುಪಲು ಆಧುನಿಕ ದೃಶ್ಯಮಾಧ್ಯಮಗಳೇ ನೇರ ಕಾರಣ ಎಂಬುದನ್ನು ಕತೆಗಾರ್ತಿ ಸುನಂದಾ ಕಡಮೆ ಪ್ರತಿಪಾದಿಸುತ್ತಾರೆ.

'ಯಾರ ಮೌನದ ಗವಿಯು' ಕತೆಯಲ್ಲಿ ತೊಡುವ ಬಟ್ಟೆಯ ಕಾರಣಕ್ಕೆ ಹೆಣ್ಣು ಅತ್ಯಾಚಾರಕ್ಕೆ ಒಳಗಾಗುತ್ತಾಳೆಂಬುದೇ ಮಾರ್ದನಿಸುತ್ತದೆ. ಯಾವುದೋ ಉಪನ್ಯಾಸ ಕಾರ್ಯಕ್ರಮಕ್ಕೆ ಹೋಗುವಾಗ ವಸಂತ ಮತ್ತು ನಿವೇದಿತಾ ಕಾರಿನಲ್ಲಿ ಕುಳಿತು ನಿರ್ಭಯಾ ಅತ್ಯಾಚಾರ ಪ್ರಕರಣ ಕುರಿತು ಆತಂಕ, ದುಗುಡ, ದುಮ್ಮಾನದಿಂದಲೇ ಮಾತನಾಡುತ್ತಾಳೆ. ಸ್ವತಃ ತನ್ನ ಗಂಡ ವಸಂತನನ್ನೇ ಈ ವಿಚಾರವಾಗಿ ಪ್ರಶ್ನಿಸುತ್ತಾ ಪುರುಷ ಪ್ರತಿನಿಧಿಯಾಗಿ ಏನು ಹೇಳುತ್ತೀಯ ಹೇಳು ಎನ್ನುತ್ತಾಳೆ. ಪತ್ರಿಕೆಗಳಲ್ಲಿ ಬಂದ ಅತ್ಯಾಚಾರ ಸುದ್ದಿಗಳು ನಿವೇದಿತಾಳ ಮನಸಿಗೆ ಘಾಸಿಯನ್ನುಂಟುಮಾಡುತ್ತವೆ. ತನ್ನ ಗಂಡನಾದ ವಸಂತನಿಗೆ "ಮೌನ ಮುರಿದ ವಸಂತ. ಕಾಮುಕರು ಅವರು ಅದು ಗಂಡಸರ ವಿಕೃತಿ, ಹೀಗೆ ಮಾಡಬಾರದಿತ್ತು ಅಂತ, ಒಂದೇ ಒಂದು ಸಲ ಹೇಳು. ಯಾವ ಮೌನದ ಅಮಾನುಷ ಗವಿಯಲ್ಲಿ ಬಂಧಿತವಾಗಿವೆ ನಿನ್ನೆ ವಿವೇಚನೆ? ಅತ್ಯಾಚಾರದ ಪರವಾಗಿ ಮಾತನಾಡುವ ಕಟುಕ ಮನಸ್ಸು ಹೊರಗೆಲ್ಲೂ ಇಲ್ಲ, ಮನೆಮನೆಗಳಲ್ಲೂ ಇವೆ, ಮಠ ಮಾನ್ಯಗಳಲ್ಲೂ ಇವೆ, ಪವಿತ್ರ ವಿಧಾನಸೌಧದಲ್ಲೂ ಇವೆ. ತನ್ನಂಥದೇ ವ್ಯಕ್ತಿಯೊಬ್ಬನ ಹೇಯ ಕೃತ್ಯದ ಕುರಿತು ತಪ್ಪಿನ ಪ್ರಜ್ಞೆಯೂ

ಕಾಡದಂತಹ ವಿಹ್ವಲ ಮನಸ್ಸು ನಿಗೆಲ್ಲಿಂದ ಬಂತು?" ಎಂದು ವಸಂತನಿಗೆ ಹೇಳುವ ನಿವೇದಿತಾಳ ಮಾತುಗಳು ಅಕ್ಷರಶಃ ಸತ್ಯ. ಆದರೆ ಇಂಥ ಸಂದರ್ಭಗಳು ಆಕಸ್ಮಿಕವಾಗಿ ಘಟಿಸಿದಾಗ ಸಮಾಜದ ಮನಸ್ಥಿತಿ ಹೇಗಿರತ್ತದೆಂಬುದನ್ನು ನಿವೇದಿತಾ ಮುಂದುವರಿದು ಹೀಗೆ ವ್ಯಾಖ್ಯಾನಿಸುವುದು ಸಂಪ್ರದಾಯ ವಿಕೃತಿ ಮನಸ್ಸಿನ ಸ್ಥಿತಿಯನ್ನು ನಂಬಿಕೆ-ಆಚರಣೆಗಳ ಹಿನ್ನೆಲೆಯಲ್ಲಿ ಕಾಣುವಂತೆ ಮಾಡುತ್ತದೆ.

ನಿರ್ಭಯಾ ಅತ್ಯಾಚಾರದ ಪಾಪಪ್ರಜ್ಞೆ ಕಾಡಬೇಕಿದ್ದ ಗಂಡಸರ ಮನಸ್ಥಿತಿಯನ್ನು ನಿವೇದಿತಾ ತಾನೇ ವಿವರಿಸುವ ಧಾಟಿಯಂತೂ ಕಥೆಯಲ್ಲಿ ವಿಭಿನ್ನವಾಗಿ ಮುಡಿದೆ. "ಅವರದು ತಪ್ಪೇ ಇಲ್ಲ. ತಪ್ಪೆಲ್ಲ ನೀವು ತೊಟ್ಟ ವಸ್ತ್ರದ್ದು. ಒನಪು ಒಯ್ಯಾರದ್ದು. ತಳಕು ಬಳುಕಿನದು', 'ಸನಾತನಿ ಸೀರೆ ತೊಟ್ಟರೂ ಅತ್ಯಾಚಾರ ಮಾಡುತ್ತೇವೆ. ಯಾಕೆಂದರೆ ಸೀರೆಯಲ್ಲೇ ನೀವು ಅತ್ಯಂತ ಸೆಕ್ಸಿಯಾಗಿ ಕಾಣುವುದು" ಎಂದು ನಿವೇದಿತಳೇ ಸಂಪ್ರದಾಯ ಮತ್ತು ನಂಬಿಕೆ, ಆಚರಣೆ, ಸಂಸ್ಕೃತಿ, ಆಚಾರಗಳ ಹೆಸರಲ್ಲಿ ಶೋಷಿಸುವ ಪುರುಷ ಮನೋಧೋರಣೆಯನ್ನ ಅತ್ಯಂತ ವ್ಯಂಗ್ಯಧಾಟಿಯಲ್ಲಿ ಟೀಕಿಸುತ್ತಾಳೆ. "ನೀನೇಕೆ ತೊಡೆತೋರುವ ಇಂಥ ಬಟ್ಟೆತೊಟ್ಟೆ? ನೀನೇಕ ಹೊತ್ತಿಲ್ಲ ಗೊತ್ತಿಲ್ಲ ಮನೆಯಿಂದ ಹೊರಗೆ ಹೋಗಿದ್ದೆ? ಅವ ಯಾವನಾದರೂ ಇರಲಿ, ಅವನ ಜೊತೆ ಯಾಕಿದ್ದೆ?" ಎಂಬ ಸಾಂಪ್ರದಾಯಿಕ ನೆಲೆಯ ಮಾತುಗಳೇ ವ್ಯತಿರಿಕ್ತಗೊಂಡು "ಏನೇ ಹೇಳಿ ನೀವು, ಇಬ್ಬರೂ ಸೇರಲು ಇಬ್ಬರ ಸಹಕಾರವೂ ಬೇಕು ಗೊತ್ತೇ? ಮೈ-ಮೊಲೆಗಳ ತುಂಬ ಕಚ್ಚಿದ ಗಾಯ ಹೇಗಾಯ್ತು? ಯೋನಿಯಿರುವ ಮೂರುವರ್ಷದ ಕಂದನೂ ನಮಗಾಯಿತು, ಎಂಬತ್ತರ ಜರ್ಜರಿತ ದೇಹವೂ. ಅವಳು ಬಾಲವೇಶ್ಯೆಯಾಗಿ ಬಳಕೆಯಲ್ಲಿದ್ದಳಂತೆ" ಎಂಬ ಮಾಧ್ಯಮಗಳ ಸೃಷ್ಟಿಯನ್ನು ಕುರಿತೂ ನಿವೇದಿತಾ ವ್ಯಂಗ್ಯಭರಿತ ಆಕ್ರೋಶದಲ್ಲಿ ಪ್ರತಿಭಟಿಸುವ ಧ್ವನಿಯಿಂದ ಮಾತನಾಡುವುದು ಕಂಡುಬರುತ್ತದೆ. ತೊಡುವ ಬಟ್ಟೆಗಿಂತ ನೋಡುವ ಕಣ್ಣುಗಳ ದೃಷ್ಟಿಯು ಸರಿಯಾಗಿರಬೇಕು. ಅತಿ ವಿಕೃತದ ಕಣ್ಣುಗಳಿಂದ ನೋಡುವ ನೋಟವೂ ಕೂಡ ಅತ್ಯಾಚಾರಕ್ಕೆ ಸಮನಾದುದೆಂದು ತಿಳಿಯಬೇಕಾಗಿದೆ.

ತಾಯಿಯ "ರಾತ್ರಿಯಲ್ಲಿ ಒಬ್ಬಳೇ ಹೇಗೆ ರೈಲಿನಲ್ಲಿ ಬರುತ್ತೀ?", "ಗಂಡು ಹುಡುಗ್ರ ವಿಷಯದಲ್ಲಿ ಜಾಗ್ರತಿ, ನಿನ್ ಮನ್ಸು ಹೋದಲ್ಲೇ ನೀನೂ ಹೋಗಾಕ ಹೋಗಬ್ಯಾಡ, ಅಷ್ಟ" ಎಂಬ ಮಾತುಗಳು ಸಂಪ್ರದಾಯ, ನಂಬಿಕೆಯಂಥ ಆಚರಣೆಗಳಲ್ಲಿ ಬಂಧಿಸುವಂತಿರುವುದನ್ನು ಕಂಡ ಅಮೂಲ್ಯಳು "ಎಲ್ಲೈ ತಮ್ಮ ಅದು ಮನ್ಸು ಅನ್ನೋದು? ತಲಿ ಬೇಕು ತಲೀ ನಮ್ ಕೆಲಸಕ್ಕ, ಅದ್ನ ಬಳಸೂದ್ರಾಗ ನಮ್ ಜೀವ್ನಾ ವ್ಯರ್ಥ ಆಗಾಕ ಹತ್ತೇತಿ, ನೀವ, ನೀವ ಕಟ್ ಕೊಟ್ ಹಣಗ್ಲಾ ಇದು" ಎಂದು ಆಧುನಿಕತೆಯ ನೆಲೆಯಲ್ಲಿ ವೈಚಾರಿಕವಾಗಿ ಪರಂಪರೆಯಿಂದ ನಡೆದುಕೊಂಡು ಬಂದ ಕೆಲವು ಅನಿಷ್ಟಗಳನ್ನು ಭಂಜಿಸಿಯೇ ಬಿಟ್ಟಿದ್ದಳು. ಇದು ಕಥೆಗಾರ್ತಿ ಸುನಂದಾ ಕಡಮೆ

ಅವರ ನೇರ ನಿರೂಪಣೆಯ ಮಾತುಗಳೆಂಬುದು ಸ್ಪಷ್ಟವಾಗುತ್ತವೆ. ಮಕ್ಕಳಿಲ್ಲದ ತನ್ನ ಹೆಂಡತಿ ಆಶಾತಾಯಿಗೆ ದತ್ತು ಮಗು ತೆಗೆದುಕೊಳ್ಳುವ ಸಲಹೆ ನೀಡಿದಾಗ ಜನ್ಮಾಂತರ, ಪಾಪಪುಣ್ಯಗಳ ಬಗ್ಗೆ ಅತೀವ ನಂಬಿಕೆವುಳ್ಳವಳಾಗಿದ್ದ ಆಶಾತಾಯಿಯು ತನ್ನ ಗಂಡನಿಗೆ ದತ್ತುಮಗುವಿನ ವಿಚಾರಕ್ಕೆ ವಿರೋಧವ್ಯಕ್ತಪಡಿಸುತ್ತ" ಎಷ್ಟು ಆಗ್ಲಿ ಅದು ನಮ್ದ ಮಗಾ ಹ್ಯಾಂಗ ಆಕ್ಕೇತಿ? ಅದರ ಕೈಯಾಗ ನಾಳೆ ನಮ್ಮ ಅಂತ್ಯ ಸಂಸ್ಕಾರ ಮಾಡಿಸಿಕೊಂಡರ ನಮಗೆ ಸರೀ ಸ್ವರ್ಗಾ ಸಿಗತೇತೋ ಇಲ್ಲೋ" ಎನ್ನುತ್ತಾಳೆ. ಸಂಪ್ರದಾಯಸ್ಥ ಮನೋಧೋರಣೆಯ ಆಶಾದೇವಿಯ ಈ ಮಾತುಗಳು ವೈಚಾರಿಕತೆಯನ್ನೇ ಅಣಕಿಸುವಂತೆ ಕಾಣುತ್ತವೆ. ಆದರೆ ಅಷ್ಟು ಸಂಪ್ರದಾಯಸ್ಥಳಾದ ಆಶಾತಾಯಿಯು ಕೊನೆಗೆ ತನ್ನ ಮನೆಯ ವಾಚ್‌ಮನ್ ಹೆಂಡತಿ ನಿಲುಮ್ಮಳ ಮೂಲಕ ತನ್ನ ಗಂಡನ ವೀರ್ಯದಿಂದ್ಲೆ ಬಾಡಿಗೆ ತಾಯ್ತನದಿಂದ ಮಗು ಪಡೆಯುತ್ತಾಳೆ. ಇದರಿಂದ ಆ ಸಂಪ್ರದಾಯದ ತಾತ್ವಿಕತೆಗೆ ಕಥೆಗಾರ್ತಿ ಕಡಮೆಯವರು ಅತ್ಯಂತ ನವಿರಾದ ರೀತಿಯ ವಿರೋಧ ವ್ಯಕ್ತಪಡಿಸುವುದು ವಿಶೇಷವಾಗಿದೆ.

'ಕುಡಿ ಕಟ್ಟಿದ ದೀಪ' ಕತೆಯ ಸುರೇಖಾ ತನ್ನ ಗಂಡನ ಆಕಸ್ಮಿಕ ಸಾವಿನಿಂದ ಜರ್ಜರಿತಳಾಗಿ ತವರುಮನೆ ಸೇರಿದ್ದಳು. ಇಂಥ ಸಂದರ್ಭದಲ್ಲಿ ಸಂಪ್ರದಾಯನಿಷ್ಠರೇ, ಹೊರಡಿಸಿದ ಠರಾವು "ಇನ್ನೂ ತುಂಬಾ ಚಿಕ್ಕವಳು ಹಾಗೆಲ್ಲ, ಹೂವು, ಕುಂಕುಮ ಬಳೆ ತೆಗೆಯುವುದು ಬೇಡ" ಎಂಬುದು ಮತ್ತೊಂದು ಮದುವೆಯ ಸುಳಿವು ನೀಡಿದ್ದು ವೈಚಾರಿಕತೆಯ ಪ್ರತೀಕವಾಗಿ ಕಂಡುಬರುತ್ತದೆ. ಕಥೆಗಾರ್ತಿ ಇಲ್ಲಿ ಪುನರ್‌ವಿವಾಹ ಅಥವಾ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವ ಮೂಲಕ ಮಹಿಳಾ ಸಬಲೀಕರಣವನ್ನು ಒತ್ತಿ ಹೇಳುತ್ತಿರುವುದು ಸ್ತ್ರೀವಾದಿ ನೆಲೆಯಲ್ಲಿ ಕಂಡುಬರುತ್ತದೆ.

ಸಂಪ್ರದಾಯ, ನಂಬಿಕೆ ಪದ್ಧತಿಯ ಕಟ್ಟುಪಾಡುಗಳಿಗೆ ಜೋತುಬಿದ್ದಿರುವ ಅನೇಕರು ಸೋಮವಾರ, ಗುರುವಾರ, ಶನಿವಾರಗಳೆಂದು ಮಾಂಸಹಾರ ಸೇವನೆಯನ್ನು ತ್ಯಜಿಸುವುದು ವಿಚಿತ್ರವಾಗಿ ಕಾಣುತ್ತದೆ. ತಮ್ಮ ಆಹಾರ ಪದ್ಧತಿಗೆ ದೇವರು–ದಿಂಡರ ಹೆಸರಲ್ಲಿ ಮೌಢ್ಯತೆ ಆಚರಿಸುವುದನ್ನು ಕಥೆಗಾರ್ತಿ ವ್ಯಂಗ್ಯವಾಗಿ ನಿರೂಪಿಸಿರುವುದು 'ಕಸದ ಬಾಗಿನ' ಕಥೆಯಲ್ಲಿ ಕಂಡುಬರುತ್ತದೆ. ಬೀಸುವ ಗಾಳಿಯಿಂದಲೋ ಅಥವಾ ಕಾಲನಿಯ ಜನರ ಅನಾಗರೀಕತೆಯ ಕಾರಣಕ್ಕೊ ಪದಕಿಯವರ ಮನೆಯ ಮುಂದೆ ಆಗಾಗ್ಗೆ ಕಸ ಗಬ್ಬುನಾರುತ್ತಿರುತ್ತದೆ. ಪದಕಿಯವರ ಮನೆಯ ಗೇಟಿನ ಮುಂದೆ ಅಕ್ಕಪಕ್ಕದ ಯಾರದ್ದೋ ಮನೆಯ ಕಸದ ಪೊಟ್ಟಣ ಬಿದ್ದಿರುತ್ತದೆ. ಅದರಲ್ಲಿದ್ದ ಅಡುಗೆ ಮನೆಯ ಕಸ ಮತ್ತು ದಿನನಿತ್ಯ ಮನೆಬಳಕೆಗೆ ಬಳಸುವ ವಸ್ತುಗಳ ಕಸದ ರಾಶಿ ಇದ್ದು ಯಥಾಪ್ರಕಾರ ತೆಗೆದು ಕಸದ ಬುಟ್ಟಿಗೆ ಹಾಕಲು ಹೋದಾಗ ದಿಗ್ದರ್ಶನವಾಗಿ "ಶ್ರಾವಣ ಮಾಸಬ್ಯಾರೇ ಸನೇಕ ಬಂತು, ನಮ್ಮ ಮಡೀ ಹುಡೀ ಭಾಳ ಇರಾವು, ಇಂಥಾ ನರಕದಾಗ ಹ್ಯಂಗ ಮಂಗಳ ಗೌರಿನ

ಕೂಡ್ಡೂದು'' ಎಂದು ಕೈಕೈ ಹಿಸಿಕಿಕೊಂಡರು.

ಮನುಷ್ಯ ತಾನೇ ಸೃಷ್ಟಿಸಿದ ಕಸದ ರಾಶಿಗೆ ಹೇಸಿಕೊಳ್ಳುವುದನ್ನು ಕಥೆಗಾರ್ತಿ ಸಾಂಕೇತಿಕವಾಗಿ ವಿವರಿಸುವ ಮೂಲಕ ಅವರಲ್ಲಿನ ಮೌಢ್ಯತೆ ಮತ್ತು ಕಂದಾಚಾರವನ್ನು ಎಳೆಎಳೆಯಾಗಿ ವಿವರಿಸಿದ್ದಾರೆ. ಇತ್ತೀಚೆಗೆ ರಾಜಕೀಯ ಕ್ಷೇತ್ರದಲ್ಲಿ ಶ್ರಾವಣ ಮಾಸದ ವಿಚಾರ ಅತ್ಯಂತ ಚರ್ಚೆಗೊಳಪಟ್ಟು ದೇಶದ ಪ್ರಧಾನಿಗಳು ಅನೇಕ ವೈಚಾರಿಕಾ ಪ್ರಜ್ಞಾವಂತರ ಟೀಕೆಗೆ ಗುರಿಯಾಗಿದ್ದನ್ನು ಇಲ್ಲಿ ಗಮನಿಸಬಹುದು.

'ದೊಡ್ಡಾಲದ ಮರ' ಕತೆಯ ಸಿದ್ದನು ಮರದ ಕೆಳಗೆ ಇರುವ ಕರಿಕಲ್ಲಿಗೆ ಪ್ರತಿ ಶನಿವಾರ ಅನೇಕ ಹೆಂಗಸರು ಬಂದು ಪೂಜೆಮಾಡುವುದನ್ನು ಕಂಡು ಗಾಬರಿಗೊಂಡಿದ್ದ. ಏಕೆಂದರೆ ಇದಕ್ಕೂ ಮೊದಲೇ ಸಿದ್ದ ಅದೇ ಕಲ್ಲಿನ ಮೇಲೆ ಎಷ್ಟೋ ದಿನಗಳವರೆಗೂ ಉಚ್ಚೆ ಹುಯ್ದಿದ್ದ. ಇದರಿಂದಾಗಿ ಸಿದ್ದ ತನ್ನ ಅಚಾತುರ್ಯಕ್ಕೆ ಅಲ್ಲಿರುವುದು ದೇವರು, ಅದರಲ್ಲೂ ಹನುಮಪ್ಪ ಎಂದೂ ತಿಳಿದು ಮೌಢ್ಯತೆಗೆ ಒಳಗಾಗಿ ಭಯಗೊಂಡು ಅದೇ ಕಲ್ಲಿಗೆ ಆ ಹೆಂಗಸರಂತೆಯೇ ತಾನು ದಿನವೂ ಎಲ್ಲಿಯದೋ ಬೀದಿ ಹೂವುಗಳನ್ನು ತಂದು ಆ ಕರಿಕಲ್ಲಿಗೆ ಏರಿಸಿ ನಮಸ್ಕರಿಸಿದ್ದನೆಂದು ಹೇಳುವಲ್ಲಿ ನಂಬಿಕೆ, ಸಂಪ್ರದಾಯದ ಹೆಸರಲ್ಲಿ ವೈಚಾರಿಕತೆಯ ಕಗ್ಗೊಲೆಯಾಗುತ್ತಿರುವುದನ್ನು ಕಥೆಗಾರ್ತಿ ಗುರುತಿಸುತ್ತಾರೆ.

ಧಾರ್ಮಿಕ ವಿಚಾರವಾಗಿ ಬಿಂದುರಾಯರು ಹಮೀದನನ್ನು ನೀವು ನಿಮ್ಮ ಮಂದಿಯಂತೆ ದಿನಕ್ಕೆ ಐದು ಬಾರಿ ನಮಾಜು ಮಾಡುತ್ತೀರಾ? ನಿಮ್ಮ ಮಂದಿಯಂತೆ ದಿನಕ್ಕೆ ಐದು ಬಾರಿ ನಮಾಜು ಮಾಡುತ್ತೀರಾ? ನಿಮ್ಮ ಮನೆಯವರು ಬುರ್ಖಾ ತೊಡದಿರಲು ನಿಮ್ಮ ಧರ್ಮದ ಅನುಮತಿ ಇದೆಯೇ ಎಂದು ಸಾಂಪ್ರದಾಯಿಕ ನೆಲೆಯಲ್ಲಿ ಕೇಳುವ ಪ್ರಶ್ನೆಗೆ ಹಮೀದನ ''ಪ್ರಾರ್ಥನೆ ಗೀರ್ತನೆ ಇವೆಲ್ಲ ಏಕಾಗ್ರತೆಗಾಗಿ ಸರ್.. ಕಛೇರಿಯಲ್ಲಿ ಸ್ವಲ್ಪ ಕಿರಿಕಿರಿಯಾದರೆ ಮನಸ್ಸಿನ ಸ್ಥಿಮಿತಕ್ಕಾಗಿ ಇಲ್ಲವೇ ವ್ಯಾಯಮಕ್ಕಾಗಿ ಆ ನಮಾಜು ಗಿಮಾಜು ಅಷ್ಟೇ'' ಎಂಬ ಮಾತುಗಳಲ್ಲಿ ವೈಚಾರಿಕಪ್ರಜ್ಞೆಯನ್ನು ಕಾಣಬಹುದು. ಧರ್ಮದ ಅಂಧಾನುಕರಣೆ ಮಾಡದೆಯೇ ವೈಚಾರಿಕತೆ ತಳಹದಿಯಲ್ಲಿ ಧರ್ಮದ ಆಚರಣೆ ಇರಬೇಕೆಂಬುದು ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಹಮೀದನ ಸಲಹೆ ಮೇರೆಗೆ ಸತ್ಯನಾರಾಯಣ ಪೂಜೆಗೆ ಬೇರುಸಮೇತ ಬಾಳೆಗಿಡದ ತೋರಣ ಕಟ್ಟಿ ಪೂಜಾಕಾರ್ಯ ನೆರವೇರಿಸಿದ್ದ ಬಿಂದುರಾಯರ ಕುರಿತು ''ಹೊಸ ಸಂಪ್ರದಾಯ, ನಾವು ಹಾಗೇ ಮಾಡಬೇಕು. ಪಾಪ ಅಷ್ಟು ಪುಟ್ಟ ಬಾಳೆಯನ್ನು ಹೇಗೆ ಕರುಣೆಯಿಲ್ಲದೇ ಕಡಿದು ಮಂಟಪ ಕಟ್ಟುತ್ತಿದ್ದೆವಲ್ಲ'' ಎಂದು ಕೆಲವರು, ''ಹಾಗೇನಿಲ್ಲ, ಹಳೆಯ ಶಾಸ್ತ್ರ ಅದು, ನಮ್ಮ ಅಜ್ಜನ ಕಾಲದಿಂದ ನೆಡೆಸಿಕೊಂಡು ಬಂದಿದ್ದೇವೆ, ಆ ಬೇರೂ ದೇವರಿಗೆ ಮೈಲಿಗೆಯೇ'' ಎನ್ನುವಲ್ಲಿ ಸಂಪ್ರದಾಯವನ್ನು

ಮನುಷ್ಯ ತನ್ನ ಅಗತ್ಯ, ಅನುಕೂಲಕ್ಕಾಗಿ ಮಾಡಿಕೊಂಡಿರುವುದೆಂಬುದನ್ನು ತಿಳಿಯಬಹುದಾಗಿದೆ.

'ತಂಕಿ' ಕತೆಯ ಆದಾ ತನ್ನ ಮಗ ತಂಕಿಗೆ 'ಸಂಜೆಯ ಹೊತ್ತು ಅಪಶಕುನ ಮಾತಾಡಬೇಡ, ನಿನಗೆ ಆಟ, ನನಗೆ ಪ್ರಾಣಸಂಕಟ' ಎನ್ನುವಲ್ಲಿ ನಂಬಿಕೆ, ಸಂಪ್ರದಾಯಗಳಿಗೆ ಜೋತುಬಿದ್ದ ಮನಸ್ಥಿತಿಯನ್ನು ಕಾಣಬಹುದು. ಅದೇ ರೀತಿ 'ಜೇಡ ಬಲೆ ನೇಯುತಿದೆ' ಕತೆಯ ಮಿತ್ರಕ್ಕಳು ಜೇಡರಬಲೆ ನೋಡಿ ಅಪಶಕುನವೆಂಬಂತೆ ಭಾವಿಸುತ್ತಾ 'ಮತ್ತೆಂಥ ಕಾಲದ ಬಲೆ' ಎಂದು ಜೇಡಬಲೆಯ ಮೇಲೆ ತನ್ನ ಪ್ರತಾಪ ತೋರಿಸುವುದು ಮೌಢ್ಯತೆಯನ್ನು ಎತ್ತಿತೋರುತ್ತದೆ. ಪರಂಪರಾನುಗತವಾಗಿ ನಡೆದುಬಂದಿರುವ ಮೌಢ್ಯಾಚರಣೆಯನ್ನು ಗೌರೀ ತನ್ನ ನೇರ ಮಾತುಗಳಲ್ಲಿಯೇ "ಈ ಆಯೀದು ತಿಂಗಳಿಗೆ ಮೂರು ದಿನಾ ಇದೇ ಗೋಳಪ್ಪಾ ಶೀ.." ಎಂದು ವ್ಯಂಗ್ಯಭರಿತವಾಗಿ ಮಾತನಾಡುವಲ್ಲಿ ವೈಚಾರಿಕತೆ ಎದ್ದು ಕಾಣುತ್ತದೆ. 'ಪ್ರಕೃತಿ ಧಾವಂತ' ಕಥೆಯ ಗೌರಿಯ ಈ ಮಾತುಗಳು ಮುಂದೆ ತನಗೇ ಅಂಥ ಸಂದರ್ಭ ಎದುರಾದಾಗ ಆಯೀ ಸಂಭ್ರಮಿಸಿದ ಪರಿಕಂಡು ಬೆರಗಾಗಿದ್ದಳು. "ಮೈಲಿಗೆಯಂತೆ ಮೈಲಿಗೆ, ಏನಾಗಿದೆ ಆಯೀಗೆ?" ಎಂದು ಪ್ರಶ್ನೆ ಮಾಡಿದ್ದ ಗೌರಿ ಜೀವನದ ಮೊದಲ ಮುಟ್ಟನ್ನು ಕಂಡು ಸಂತೋಷಗೊಂಡಿದ್ದಳು. ಇಂದಿಗೂ ಸಂಪ್ರದಾಯಸ್ಥ ಮನೆಗಳಲ್ಲಿ ಹೆಣ್ಣು ಹೊರಗಾದರೆ (ಮುಟ್ಟು) ಅವಳನ್ನು ಮೂರು–ನಾಲ್ಕು ದಿನ ಮನೆಯಿಂದ ಹೊರಗೆ ಇರಿಸುವ ಅವೈಜ್ಞಾನಿಕ ಸಂಪ್ರದಾಯ ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ. ಅದನ್ನು ಕಥೆಗಾರ್ತಿ ಸೂಕ್ಷ್ಮ ನೆಲೆಗಟ್ಟಿನಲ್ಲಿ ವಿವರಿಸುವ ಕಥನಶೈಲಿ ಇಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ.

ಒಟ್ಟಾರೆ ಸುನಂದಾ ಕಡಮೆ ಅವರ ಸಾಮಾಜಿಕ ಮಹಿಳಾಕೇಂದ್ರಿತ ಕಥೆಗಳಲ್ಲಿ ಕಂಡುಬರುವ ಮಹಿಳೆ ಮತ್ತು ವೈಚಾರಿಕ ಪ್ರಜ್ಞೆಯನ್ನು 21ನೇ ಶತಮಾನದಲ್ಲೂ ಮಹಿಳೆಯು ಪುರುಷಾಧೀನದಲ್ಲೇ ಇರವಂತೆ ನಿಯಂತ್ರಿಸುವ ಸಮಾಜದ ಪರಿಯನ್ನು ಮತ್ತು ಅಂಥ ಸಾಂಪ್ರದಾಯಿಕ ಕಟ್ಟಳೆಗಳಿಂದ ಹೊರಬರುವ, ವಿರೋಧಿಸಿ ಪ್ರತಿಭಟಿಸುವ ಮಹಿಳಾ ನೆಲೆಯನ್ನು ವೈಚಾರಿಕ ನೆಲೆಯಲ್ಲಿ ಗುರುತಿಸಲು ಪ್ರಸ್ತುತ ಲೇಖನದಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

## ಪರಾಮರ್ಶನ ಗ್ರಂಥಗಳು:


1. ಸುನಂದಾ ಕಡಮೆ. (2019). ಗಾಂಧಿ ಚಿತ್ರದ ನೋಟು. ಅಹರ್ನಿಶಿ ಪ್ರಕಾಶನ. ಶಿವಮೊಗ್ಗ.
2. ಸುನಂದಾ ಕಡಮೆ. (2016). ತುದಿ ಮಡಚಿಟ್ಟ ಪುಟ. ಅಹರ್ನಿಶಿ ಪ್ರಕಾಶನ. ಶಿವಮೊಗ್ಗ.
3. ಸುನಂದಾ ಕಡಮೆ. (2013). ಕಂಬಗಳ ಮರೆಯಲ್ಲಿ. ಅಂಕಿತ ಪುಸ್ತಕ ಪ್ರಕಾಶನ. ಬೆಂಗಳೂರು.
4. ಸುನಂದಾ ಕಡಮೆ. (2005). ಪುಟ್ಟ ಪಾದದ ಗುರುತು. ಛಂದ ಪುಸ್ತಕ ಪ್ರಕಾಶನ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.